<u>ದಿನಾಂಕಃ 06.04.2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು.</u>

<u>ಮುಂದುವರೆದ ಪಾಟೀಸವಾಲುಃಶ್ರೀ. ಸಿಪಿ ವಕೀಲರಿಂದ ಪ್ರತಿವಾದಿ ಪರವಾಗಿ.</u>

6. ದಾವಾ ಶೆಡ್ಯೂಲ್ ಸ್ವತ್ತಿನ ಮಾಲೀಕನಾಗಿರುತ್ತೇನೆ ಎನ್ನುವ ಕುರಿತಂತೆ ಏನಾದರೂ ದಾಖಲೆಗಳನ್ನು ಕೊಟ್ಟಿರುತ್ತೀರಾ ಎಂದರೆ ಕೊಟ್ಟಿರುತ್ತೇನೆ. ನಾನು ದಾವಾ ಶೆಡ್ಯೂಲ್ ಸ್ವತ್ತಿನ ಮಾಲೀಕನು ಆಗಿರುತ್ತೇನೆ ಎನ್ನುವ ಕುರಿತಂತೆ ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ದಾವಾ ಶೆಡ್ಯೂಲ್ ಸ್ವತ್ತು ಯಾರಿಂದ ಹೇಗೆ ಬಂತು ಎಂದರೆ ನಮ್ಮ ತಂದೆಯವರು ದಾನಪತ್ರದ ಮೂಲಕಲ ನನಗೆ ಕೊಟ್ಟಿರುತ್ತಾರೆ. ದಾನಪತ್ರವನ್ನು ಯಾವಾಗ ಮಾಡಿಕೊಡಲಾಗಿರುತ್ತದೆ ಎಂದರೆ ಸುಮಾರು ಹದಿನೈದು ಇಪ್ಪತ್ತು ವರ್ಷಗಳ ಹಿಂದೆ ಮಾಡಿಕೊಟ್ಟಿರುತ್ತಾರೆ. ದಾವಾ ಶೆಡ್ಯೂಲ್ ಸ್ವತ್ತಿನ ಖಾತೆಯು ಯಾರ ಹೆಸರಿನಲ್ಲಿ ಇರುತ್ತದೆ ಎಂದರೆ ನಮ್ಮ ತಂದೆಯ ಹೆಸರಿನಲ್ಲಿ ಇರುತ್ತದೆ. ಇಲ್ಲಿಯವರೆಗೂ ಸ್ವತ್ತಿನ ಖಾತೆಯನ್ನು ನನ್ನ ಹೆಸರಿನಲ್ಲಿ ಮಾಡಿಸಿ ಕೊಂಡಿರುವುದಿಲ್ಲ. ದಾವಾ ಸ್ವತ್ತಿನ ಖಾತೆಯು ನಮ್ಮ ತಂದೆಯ ಹೆಸರಿನಲ್ಲಿ ಇರುವುದರಿಂದ ಹಾಗೂ ನನ್ನ ಹೆಸರಿಗೆ ಬರೆದುಕೊಟ್ಟಿರುತ್ತಾರೆ ಎನ್ನುವ ಕುರಿತಂತೆ ದಾಖಲೆಯನ್ನು ಹಾಜರುಪಡಿಸದೇ ಇದ್ದರಿಂದ ನಮ್ಮ ತಂದೆಯವರೇ ದಾವಾ ಸ್ವತ್ತಿನ ಮಾಲೀಕರು ಆಗಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ತಂದೆಯವರು ಬರೆದುಕೊಟ್ಟಿರುತ್ತಾರೆ ಎನ್ನಲಾದ ದಾನಪತ್ರವನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿರುವುದಿಲ್ಲ. ನಾನೇ ದಾವಾಸ್ವತ್ತಿನ ಮಾಲೀಕನು ಆಗಿರುತ್ತೇನೆ ಎನ್ನವ ಕುರಿತಂತೆ ಏನು ದಾಖಲೆ ಇರುತ್ತದೆ ಎಂದರೆ ನೋಂದಣಿಯಾದ ದಾನಪತ್ರ ಇರುತ್ತದೆ. ದಾವಾ ಸ್ವತ್ತಿನ ಕುರಿತಂತೆ ನನ್ನ ಹೆಸರಿನಲ್ಲಿ ಇರುವ ಯಾವುದೇ ದಾಖಲೆಗಳನ್ನು ಹಾಜರುಪಡಿಸದೇ ಇದ್ದರಿಂದ ಈ ದಾವೆಯನ್ನು ದಾಖಲು ಮಾಡಲು ಯಾವುದೇ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ಈ ದಾವೆಯಲ್ಲಿನ ವಾದಪತ್ರದಲ್ಲಿ ಎಲ್ಲಿಯೂ ನಾನೇ ದಾವಾ ಸ್ವತ್ತಿನ ಮಾಲೀಕನಾಗಿರುತ್ತೇನೆ ಎಂದು ಹೇಳಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

7. ನನ್ನ ಮತ್ತು ಪ್ರತಿವಾದಿಯ ಮಧ್ಯೆ ಯಾವುದೇ ಬಾಡಿಗೆ ಕರಾರುಪತ್ರವಾಗಲಿ ಅಥವಾ ಪರವಾನಿಗೆಯಾಗಲಿ ಅಥವಾ ಏನಾದರೂ ಪಾಲುದಾರಿಕೆ ಪತ್ರವಾಗಲಿ ಮಾಡಿಕೊಂಡಿರುವುದಿಲ್ಲ ಎಂದರೆ ಸರಿ. ಪ್ರತಿವಾದಿಯು ನನ್ನ ಕೆಳಗಡೆ ಬಾಡಿಗೆದಾರರು ಆಗಿರುತ್ತಾರೆ ಎಂದು ದಾವೆಯಲ್ಲಿ ಹೇಳಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಕಳುಹಿಸಿರುವ ನೋಟೀಸಿನಲ್ಲಿ ಪ್ರತಿವಾದಿಯು ನನ್ನ ಕೆಳಗಡೆ ಬಾಡಿಗೆದಾರರಾಗಿರುತ್ತಾರೆ ಎಂದು ಹೇಳಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯು ನನ್ನ ಕೆಳಗಡೆ ಬಾಡಿಗೆದಾರರು ಆಗಿದ್ದರು ಎಂದು ತೋರಿಸಲು ಏನು ದಾಖಲೆಗಳನ್ನು ಹಾಜರುಪಡಿಸಿರುತ್ತೀರಿ ಎಂದರೆ ಅವರು ಚೆಕ್ಕುಗಳನ್ನು ಕೊಟ್ಟಿದ್ದರು. ಪ್ರತಿವಾದಿಯು ಚೆಕ್ಕನ್ನು ಬಾಡಿಗೆಯ ಸಂಬಂದವಾಗಿ ಕೊಡುತ್ತಿದ್ದರು ಎನ್ನುವ ಕುರಿತಂತೆ ನಾನು ಯಾವುದೇ ರಶೀದಿಯನ್ನು ಕೊಟ್ಟಿರುವುದಿಲ್ಲ. ಚೆಕ್ಕನ್ನು ಬಾಡಿಗೆಯ ಹಣದ ಸಂಬಂದವಾಗಿ ಕೊಟ್ಟಿರುತ್ತಾರೆ ಎಂದು ತೋರಿಸಲು ಏನು ದಾಖಲೆ ಹಾಜರುಪಡಿಸಿರುತ್ತೀರಿ ಎಂದರೆ ಚೆಕ್ಕೇ ದಾಖಲೆ ಆಗಿರುತ್ತದೆ. ನನಗಾಗಲಿ ಅಥವಾ ನನ್ನ ತಂದೆಗಾಗಲಿ ಪ್ರತಿವಾದಿಯು ಯಾವತ್ತೂ ಬಾಡಿಗೆದಾರರು ಆಗಿದ್ದಿರಲಿಲ್ಲ ಎಂದರೆ ಸರಿಯಲ್ಲ. ನಮ್ಮ ಮತ್ತು ಪ್ರತಿವಾದಿಯ ಮಧ್ಯೆ ಬಾಡಿಗೆ ಕರಾರುಪತ್ರ ಮಾಡಿಕೊಳ್ಳಲು ಏನು ತೊಂದರೆ ಇದ್ದಿರಲಿಲ್ಲ ಎಂದರೆ ಇದ್ದಿರಲಿಲ್ಲ. ನಮ್ಮ ತಂದೆಯವರು ನನಗೆ ದಾನಪತ್ರ ಬರೆದುಕೊಟ್ಟ ನಂತರ ದಾವಾ ಶೆಡ್ಯೂಲ್ ಸ್ವತ್ತಿಗೆ ನಾನೇ ಮಾಲೀಕನಾಗಿರುತ್ತೇನೆ ಹಾಗೂ ಬಾಡಿಗೆಯನ್ನು ನನಗೆ ಕೊಡುವಂತೆ ಕೇಳಿ ಪ್ರತಿವಾದಿಗೆ ಯಾವುದೇ ಪತ್ರವನ್ನು ಬರೆದಿರುವುದಿಲ್ಲ. ಸಾಕ್ಷಿ ಸ್ವತಃ ಬಾಯಿ ಮಾತಿನ ಮೂಲಕ ಕೇಳಿರುತ್ತೇನೆ ಎಂದು ನುಡಿದಿರುತ್ತಾರೆ.

<u>ವಕೀಲರ ವಿನಂತಿಯ ಮೇರೆಗೆ ಮುಂದುವರೆದ ಪಾಟೀಸವಾಲನ್ನು ಮುಂದೂಡಲಾಯಿತು.</u>

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸ ಇದೆ.

15 ನೇ ಅಪರ ನ್ಯಾಯಾಧೀಶರು

ಮತ್ತು ಎಂಎಸಿಟಿ